# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 460 (593) |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 11-03-2025 |

***

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕೈಮಗ್ಗ ನೇಕಾರ ಸಹಕಾರ ಸಂಘಗಳು ಉತ್ಪಾದಿಸುವ ವಸ್ತುಗಳ (ಮಾಲುಗಳ) ಮಾರಾಟಕ್ಕೆ ಶೇಕಡಾ 20 ರಷ್ಟು ರಿಯಾಯಿತಿ ಪ್ರೋತ್ಸಾಹ (ರಿಬೇಟ್) ನೀಡಲಾಗುತ್ತಿದ್ದು, ಅದನ್ನು ಶೇಕಡಾ 40 ಕ್ಕೆ ವಿಸ್ತರಿಸಬೇಕು ಎಂದು ಹಲವಾರು ವರ್ಷಗಳಿಂದ ಬೇಡಿಕೆ ಇದ್ದು, ನೇಕಾರರ ಸಹಕಾರ ಸಂಘಗಳ ಉಳುವಿಗಾಗಿ 40% ಸಬ್ಸಿಡಿ (ರಿಯಾಯಿತಿ) ನೀಡಲು ಸರ್ಕಾರದ ಚಿಂತನೆ ಇದೆಯೇ; (ಮಾಹಿತಿ ಒದಗಿಸುವುದು) | ಕೈಮಗ್ಗ ನೇಕಾರರ ಸಹಕಾರಿ ಸಂಘಗಳು / ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ / ಕೈಮಗ್ಗ ನೇಕಾರರ ಮಹಾಮಂಡಳಗಳಿಗೆ ಪ್ರಸ್ತುತ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಶೇ.20 ರ ರಿಬೇಟ್ ಪ್ರೋತ್ಸಾಹ ಸಹಾಯಧನವನ್ನು ನೀಡಲಾಗುತ್ತಿದೆ. ಸದರಿ ರಿಬೇಟ್ ಪ್ರೋತ್ಸಾಹ ಸಹಾಯಧನವನ್ನು ಶೇ.40 ಕ್ಕೆ ಹೆಚ್ಚಿಸುವ ಕುರಿತ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ. |
| ಆ | ನೇಕಾರರ ನೇಯ್ಗೆಯಲ್ಲಿಯೂ ಬದಲಾವಣೆ ತರುವ ನಿಟ್ಟಿನಲ್ಲಿ ಹಳೆಯ ಶೈಲಿಯ ಮಗ್ಗಗಳಿಂದ ರೇಪಿಯರ್ ಕಂಪ್ಯೂಟರ್ ಜಕಾರ್ಡ್ ನಂತಹ ಮಗ್ಗಗಳಿಗೆ ಬದಲಾಯಿಸಲು ಸರ್ಕಾರ ಮುಂದಾಗಿದೆಯೇ; (ಮಾಹಿತಿ ನೀಡುವುದು) | ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ರಲ್ಲಿ ಹೊಸದಾಗಿ ರೇಪಿಯರ್ ಕಂಪ್ಯೂಟರ್ ಜಕಾರ್ಡ್ ನಂತಹ ಮಗ್ಗಗಳನ್ನು ಅಳವಡಿಸಲು ಸಾಲಾಧಾರಿತ ಬಂಡವಾಳ ಸಹಾಯಧನ ನೀಡಲು ಅವಕಾಶವಿರುತ್ತದೆ. |
| ಇ | ಕೈಮಗ್ಗ ನೇಕಾರರಿಗೆ ಹೊಸ ಯೋಜನೆಗಳೊಂದಿಗೆ ಯುವಕರಿಗೆ ಪ್ರೋತ್ಸಾಹ ನೀಡುವ ದಿಶೆಯಲ್ಲಿ ಕೈಮಗ್ಗ ನೇಕಾರಿಕೆ ಉದ್ಯೋಗದ ಉಳಿವಿಗಾಗಿ ಸರ್ಕಾರದ ಎಲ್ಲಾ ಇಲಾಖೆಗಳ ಸಿಬ್ಬಂದಿಗಳು ಕೈಮಗ್ಗ ಉತ್ಪಾದಿತ ವಸ್ತುಗಳನ್ನು ಖರೀದಿಸಲು ಸರ್ಕಾರ ಆದೇಶ ಮಾಡುವುದೇ; | ಸರ್ಕಾರದ ಮುಂದೆ ಈ ರೀತಿಯ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಈ | ವೃತ್ತಿಪರ ನೇಕಾರರನ್ನು ಕಾರ್ಮಿಕರೆಂದು ಪರಿಗಣಿಸಬೇಕೆಂದು ಅನೇಕ ವರ್ಷಗಳಿಂದ ನೇಕಾರರ ಬೇಡಿಕೆ ಇದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | ಇಲಾಖೆಯಿಂದ ಕೈಮಗ್ಗ ಹಾಗೂ ವಿದ್ಯುತ್ ಮಗ್ಗ ನೇಕಾರರ ಮಾಹಿತಿಯ ದತ್ತಾಂಶವನ್ನು ಆಯುಕ್ತರು, ಕಾರ್ಮಿಕ ಇಲಾಖೆ, ಬೆಂಗಳೂರು ಇವರಿಗೆ ವೃತ್ತಿಪರ ನೇಕಾರರನ್ನು ಕಾರ್ಮಿಕರೆಂದು ಪರಿಗಣಿಸಲು ಮಾಹಿತಿಯನ್ನು ಕಳುಹಿಸಿಕೊಡಲಾಗಿದೆ. |

**ಸಂಖ್ಯೆ: CI 30 JAKE 2025**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು